## ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

## ಸಿ ಸಿ ನಂಃ 1398/2023

ಸಾಕ್ಷಿಯ ಹೆಸರು: ಕೆ ಹೆಚ್ ಭಾರತಿ

ಚಾಸಾ 2ಃ

ತಂದೆ / ಗಂಡನ ಹೆಸರು : ಹೆಚ್ ಆರ್ ನಾಗೇಶ

ಪ್ರಾಸಾ ಃ 4

ವಯಸ್ಸು : 51

ಉದ್ಯೋಗ : ಪಿ ಎಸ್ ಐ , ಪಿರಿಯಾಪಟ್ಟಣ ಪೋಲಿಸ್ ಠಾಣೆ

ವಾಸ ಸ್ಥಳ : ಕುಶಾಲನಗರ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 13.02.2026**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು 2022 ಜುಲೈ ರಿಂದ 2024 ಆಗಸ್ಟ ರವರೆಗೆ ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಅಪರಾಧದ ವಿಬಾಗದಲ್ಲಿ ಪಿ ಎಸ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28.08.2023 ರಂದು ನಾನು ಹಾಗೂ ಚಾಸಾ 3 ರವರು ಠಾಣೆಯಲ್ಲಿರುವಾಗ ಚಾಸಾ 18 ರವರು ಈ ಪ್ರಕರಣದ ವಿಚಾರವನ್ನು ತಿಳಿಸಿ ನನ್ನನ್ನು ಹಾಗೂ ಚಾಸಾ 3 ರವರನ್ನು ಅವರೊಂದಿಗೆ ಇಲಾ ಖಾ ಜೀಪಿನಲ್ಲಿ ಸಮಯ ಮದ್ಯಾಹ್ನ 2.00 ಗಂಟೆಗೆ ಠಾಣೆಯಿಂದ ಹೊರಟು 2.20 ಗಂಟೆಗೆ ಗುಡ್ಡೆಹೊಸೂರು ಜಂಕ್ಷನ್ ಬಳಿ ತಲುಪಿದಾಗ ಚಾಸಾ 18 ರವರು ಚಾಸಾ 3 ರವರಿಗೆ ಪಂಚರನ್ನು ಕರೆ ತರುವಂತೆ ತಿಳಿಸಿದ್ದು ಸದರಿ ಚಾಸಾ 3 ರವರು ಚಾಸಾ 4 ಮತು್ತು 5 ರವರನ್ನು ಚಾಸಾ 18 ರವರ ಮುಂದೆ ಕರೆ ತಂದಿದ್ದು ಚಾಸಾ 18 ರವರು ಈ ಕೇಸಿನ ವಿಚಾರವನ್ನು ಚಾಸಾ 4 ಮತ್ತು 5ರವರಿಗೆ ತಿಳಿಸಿ ಪಂಚರಾಗುವಂತೆ ಕೇಳಿಕೊಂಡಿರುತ್ತಾರೆ. ಸದರಿಯವರು ಪಂಚರಾಗಲು ಒಪ್ಪಿದ ಮೇರೆಗೆ ಅವರಿಗೆ ನೋಟಿಸು

ಜಾರಿ ಮಾಡಲಾಗಿರುತ್ತದೆ. ಪಂಚರು ಮತ್ತು ನಮ್ಮೊಂದಿಗೆ ಚಾಸಾ 18 ರವರು ಆರೋಪಿಯ ಮನೆ ಬಳಿ ಹೋದಾಗ ಮನೆಯ ಮುಂದಿನ ಶೆಡ್ ನ ಬಳಿ ಆರೋಪಿಯು ಮಧ್ಯದ ಪ್ಯಾಕೇಟುಗಳನ್ನು ಮಾರಾಟ ಮಾಡುತ್ತಿರುವುದು ಕಂಡು ಬಂದಿರುತ್ತದೆ. ಚಾಸಾ 18 ರವರು ನಮ್ಮೊಂದಿಗೆ ಸದರಿ ಮಹಿಳೆಯ ಬಳಿ ಹೋಗಿ ಸುತ್ತಿ ವರೆದು ನಿಲ್ಲಿಸಿದ್ದು ಅವರ ಹೆಸರನ್ನು ಕೇಳಲಾಗಿ ಅವರು ಸರೋಜಮ್ಮ ಎಂಬುದಾಗಿ ತಿಳಿಸಿರುತ್ತಾರೆ. ಹಾಗೂ ಮಧ್ಯದ ಪ್ಯಾಕೇಟುಗಳನ್ನು ಮಾರಾಟ ಮಾಡಲು ಸರಕಾರದ ಪರವನಾಗಿ ಇದೆಯೇ ಎಂದು ಚಾಸಾ 18 ರವರು ಕೇಳಿದಾಗ ಇಲ್ಲ ಎಂದು ಆರೋಪಿಯು ತಿಳಿಸಿರುತ್ತಾರೆ . ಶೆಡ್ ನ್ನು ಚಾಸಾ 18 ರವರು ನಮ್ಮೊದಿಗೆ ಪಪಿರಿಶೀಲನೆ ಮಾಡಿದಾಗ ಶೆಡ್ ನ ಹಿಂಬದಿಯಲ್ಲಿ ಪ್ಲಾಸ್ಟಿಕ್ ಕವರ ಇದ್ದು ಸದರಿ ಕವರನ್ನು ನಮ್ಮಗಳ ಸಮಕ್ಷಮ ತೆಗೆದು ನೋಡಲಾಗಿ 28 90 ಎಂ ಎಲ್ ನ ಒರಿಜನಲ್ ಚಾಯ್ಸು ಡೇಲಕ್ಸ ವಿಸ್ಕಿ ಪ್ಯಾಕೇಟುಗಳು ಇದ್ದು ಸದರಿ ಪ್ಯಾಕೇಟುಗಳನ್ನು ಚಾಸಾ 18 ರವರು ನಮ್ಮ ಗಳ ಸಮಕ್ಷಮ ಪ್ರತ್ಯೇಕವಾಗಿ ಪ್ರತೇ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಒಲಿದು ಕೆ ಆರ್ ಎಂಬ ಅರಗಿನಿಂದ ಸೀಲ್ ಮಾಡಿರುತ್ತಾರೆ. ಹಾಗೂ ನನ್ನ ಮತ್ತು ಚಾಸಾ 3 ರಿಂದ 5 ರವರ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಮಹಿಳೆಯನ್ನು ಅಂಗಶೋಧನೆ ಮಾಡಲಾಗಿ ಅವರ ಬಳಿ ರೂ 200/- ದೊರಕಿದ್ದು ಸದರಿ ಹಣ ಎಲ್ಲಿಂದ ಬಂತು ಎಂದು ಕೇಳಲಾಗಿ 4 ಟೆಟ್ರಾ ಪ್ಯಾಕೇಟುಗಳನ್ನು ರೂ 50 ರಂತೆ ಮಾರಾಟ ಮಾಡಿರುತ್ತೇನೆ ಎಂಬುದಾಗಿ ತಿಳಿಸಿರುತ್ತಾರೆ. ಸದರಿ ಮಹಜರನ್ನು ಸಮಯ 3.00-4.00 ಗಂಟೆಯವರೆಗೆ ಬರೆಯಲಾಗಿರುತ್ತದೆ. ಚಾಸಾ 17 ರವರಿಂದ ಭಾವಚಿತ್ರ ಮತ್ತು ವಿಡಿಯೋವನ್ನು ಚಾಸಾ18 ರವರು ಮಾಡಿಸಿರುತ್ತಾರೆ. ಸ್ವತ್ತುಗಳು ಹಾಗೂ ಆರೋಪಿಯೊಂದಿಗೆ ನಮ್ಮನ್ನು ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ.

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮಹಜರನ್ನು ಈಗಾಗಲೆ ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2ಸಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ ಪ್ಲಾಸ್ಟಿಕ್ ಕವರನ್ನು ಬಿಚ್ಚಿ ಅದರಲ್ಲಿರುವ 28 ಟೆಟ್ರಾ ಪ್ಯಾಕೇಟುಗಳನ್ನು ಮತ್ತು 200/- ನಗದು ತೋರಿಸಲಾಗಿ ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ ಮೇರೆಗೆ ಮು ಮಾ 1 ರಿಂದ 3 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸಿಸುತ್ತೇನೆ ಎಂದು ನುಡಿದರು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಸಿ ಎಸ್ ವಕೀಲರಿಂದ**

ಕೃತ್ಯ ನಡೆದ ಸ್ಥಳ ಗುಡ್ಡೆಹೊಸೂರು ಜಂಕ್ಷನ್ ನಿಂದ 200-250 ಅಡಿ ದೂರದಲ್ಲಿರುತ್ತದೆ. ಶೆಡ್ ನಿಂದ ಮುಖ್ಯ ರಸ್ತೆ ಕಾಣುವುದಿಲ್ಲ. ಮುಖ್ಯ ರಸ್ತೆಗೆ ಕೃತ್ಯ ನಡೆದ ಸ್ಥಳ ಸುಮಾರು 50ಅಡಿ ದೂರ ಇರುತ್ತದೆ. ಶೆಡ್ ನ ಅಕ್ಕಪಕ್ಕ ಮನೆಗಳು ಇರುತ್ತವೆ. ನಾನು ಕೃತ್ಯನಡೆದ ಸ್ಥಳಕ್ಕೆ ಹೋದಂತಹ ಸಂದರ್ಬದಲ್ಲಿ ಗ್ರಾಹಕರು ಇರುವುದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ಯಾವುದೆ ಸಾರ್ವಜನಿಕರನ್ನು ವಿಚಾರಣೆ ಮಾಡಿರುವುದಿಲ್ಲ. ಆರೋಪಿ ಯ ಅಂಗಶೋದೆಯನ್ನು ನಾನೆ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಬಳಿ ಮೊಬೈಲ್ ಹಾಗೂ ಹಣ ಇರುವುದಿಲ್ಲ. ಆ ಸಮಯದಲ್ಲಿ ನಮ್ಮ ಸಿಬ್ಬಂದಿಯವರ ಬಳಿ ಮೊಬೈಲ್ ಹಾಗು ಹಣ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನಾನು ನನ್ನ ಅಂಗಶೋದನೆ ಮಾಡಿಕೊಂಡಿರುತ್ತೇನೆ ಇದರ ಬಗ್ಗೆ ನಿಪಿ 2 ರಲ್ಲಿ ನಮೂದು ಇರುವುದಿಲ್ಲ.

ನಿಪಿ2 ರಲ್ಲಿ ವಶಪಡಿಸಿಕೊಂಡ ಮು ಮಾ ಗಳನ್ನು ಸಿರೀಯಲ್ ನಂ , ಬ್ಯಾಚ್ ನಂ, ಮತ್ತು ಮ್ಯಾನುಫ್ಯಕಚೇರಿಂಗ್ ಡೇಟ್ ಬಗ್ಗೆ ಉಲ್ಲೇಖ ಇರುತ್ತದೆ ಆ ನಂಬರಗಳ ಬಗ್ಗೆ ನನಗೆ ನೆನಪಿಲ್ಲ. ನಿಪಿ 2 ರಲ್ಲಿ ಹಣವನ್ನು ಎಲ್ಲಿ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿಯು ಅವರ ಎದೆಯ ಭಾಗದಲ್ಲಿ ಇಟ್ಟುಕೊಂಡಿದ್ದರು ಕೇಳಿದ್ದಕ್ಕೆ ತೆಗೆದುಕೊಟ್ಟರು ಎಂದು ನುಡಿದರು. ಮು ಮಾ 1 ಆರೋಪಿ ಎಲ್ಲಿಂದ ತೆಗೆದುಕೊಂಡು ಬಂದಿದ್ದರು ಎಂದು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಚಾಸಾ 18 ರವರು ಮಾಡಿರುತ್ತಾರೆ ಎಂದು ನುಡಿದರು. ನನ್ನ ಸಮಕ್ಷಮ ಚಾಸಾ 18 ರವರು ಮು ಮಾ 1 ರ ಸಂಬಂಧ ಆರೋಪಿಯನ್ನು ವಿಚಾರಣೆ ಮಾಡಿರುವುದಿಲ್ಲ. ಮು ಮಾ 1 28 ಟೆಟ್ರಾ ಪ್ಯಾಕೇಟುಗಳಲ್ಲಿ ಮತ್ತು ಮು ಮಾ 2 ಮತ್ತು 3 ರಲ್ಲಿ ನನ್ನ ಸಹಿ ಇರುವುದಿಲ್ಲ. ಮು ಮಾ 2 ಮತ್ತು 3 ರಲ್ಲಿ ಪಂಚರ ಸಹಿಯಾಗಲಿ ಮತ್ತು ಚಾಸಾ 3 ಮತ್ತು 18 ರವರ ಇರುವುದಿಲ್ಲ ಎಂದರೆ ಸರಿ . ನಾನು ಸ್ಥಳಕ್ಕೆ ಹೋಗದೆ ಇದ್ದರೂ ಚಾಸಾ18 ರವರ ಮಾತು ಕೇಳಿ ಠಾಣೆಯಲ್ಲಿ ತಯಾರಿಸಿದ ನಿಪಿ 2 ಕ್ಕೆ ಸಹಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಮು ಮಾ 1 ರಿಂದ 3 ಕ್ಕೂ ಮತ್ತು ಆರೋಪಿ ಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಗೆ ಸಂಬಂದಪಟ್ಟ ಶೆಡ್ ಯಾವುದೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾದಂ, ಕುಶಾಲನಗರ.